ಆ) ಸರ್ಕಾರದ ಗಮನಕ್ಕೆ ಬಂದಿದೆ.

ಇ) ಗುತ್ತಿಗೆ ಕರಾರಿನನ್ವಯ ದಿನಾಂಕ 21.8.2000 ರಂದು ಪ್ರಾರಂಭಿಸಿ 20.5.2001 ರೊಳಗೆ ಕಾಮಗಾರಿ ಪೂರ್ಣಗೊಳಿಸಬೇಕಿದ್ದು, ವಿಳಂಬವಾಗಿರುವ ಹಿನ್ನೆಲೆಯಲ್ಲಿ ಕರಾರಿನನ್ವಯ ಕ್ರಮ ತೆಗೆದುಕೊಳ್ಳಲಾಗುವುದು.

ಈ) ರೂ. 75 ಕೋಟಿ ಯೋಜನೆ ಕಾರ್ಯಕ್ರಮದಡಿಯಲ್ಲಿ ಅನುದಾನದ ಲಭ್ಯತೆ ಇರದ ಕಾರಣ ಕಾಮಗಾರಿಯನ್ನು ಯಥಾ ಸ್ಥಿತಿಯನ್ನು ಅಂತಿಮಗೊಳಿಸಿ ತದನಂತರ ಲಭ್ಯವಾಗುವ ಅನುದಾನದಡಿ ಕಾಮಗಾರಿ ಕೈಗೆತ್ತಿಕೊಂಡು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಉ) ಉಳಿಕೆ ಕಾಮಗಾರಿಗೆ ಅನುದಾನ ಲಭ್ಯವಾದ ಕೂಡಲೇ ಇಲಾಖಾ ನಿಯಮಾನುಸಾರ ಕಾಮಗಾರಿ ಕೈಗೆತ್ತಿಕೊಂಡ ನಂತರ 2 ತಿಂಗಳೊಳಗೆ ಪೂರ್ಣಗೊಳಿಸಲಾಗುವುದು.

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಆರ್.ಐ.ಡಿ.ಎಫ್ 3 ಯೋಜನೆ ಬಗ್ಗೆ

2418 (2807) : ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಿರಿಯಾಪಟ್ಟಣ ಮತ ಕ್ಷೇತ್ರದಲ್ಲಿ ಆರ್.ಐ.ಡಿ.ಎಫ್ 3 ಯೋಜನೆಯಡಿಯಲ್ಲಿ ಕೊಪ್ಪ-ಎನ್.ಇ. ಆಯಿಲ್ ಪ್ಲಾಂಟೇಷನ್ ರಸ್ತೆ ಹಾಗೂ ಹಿಟ್ನ ಹೆಬ್ಬಾಗಿಲು-ಕಲ್ಕೆರೆ ಮಾಕೋಡು ರಸ್ತೆಗಳನ್ನು ಡಾಂಬರೀಕರಣಕ್ಕೆ ಆಯ್ಕೆ ಮಾಡಲಾಗಿದ್ದು ಯಾವಾಗ; ಸದರಿ ರಸ್ತೆಗಳಲ್ಲಿ ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ, ಕಾಮಗಾರಿ ಪೂರ್ಣಗೊಳಿಸಲು ತೆಗೆದುಕೊಂಡ ಕ್ರಮಗಳಾವುವು?

ಇ) ಎಷ್ಟು ತಿಂಗಳಲ್ಲಿ ಸದರಿ ರಸ್ತೆಗಳಿಗೆ ಡಾಂಬರೀಕರಣ ಮಾಡಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಈ ಎರಡೂ ರಸ್ತೆಗಳಿಗೆ 1997-98ನೇ ಸಾಲಿನಲ್ಲಿ ಅಂದಾಜುಗಳನ್ನು ತಯಾರಿಸಿದ್ದು, ಇವುಗಳಿಗೆ ನಬಾರ್ಡ್‌ನಿಂದ 1998-99 ರಲ್ಲಿ ಆರ್.ಐ.ಡಿ.ಎಫ್ 4 ರಲ್ಲಿ ಎಂ.ಎ.ಡಿ.ಬಿ. ಅಡಿ ಮಂಜೂರಾಗಿರುತ್ತದೆ. ಈ ಕಾಮಗಾರಿಗಳನ್ನು ನಿರ್ವಹಿಸುವ ಸಮಯದಲ್ಲಿ ಹೆಚ್ಚುವರಿ ಅಂಶಗಳ ಅವಶ್ಯಕತೆ ಕಂಡು ಬಂದಿದ್ದರಿಂದ ನಬಾರ್ಡ್ ಅನುಮೋದನೆಯಂತೆ ಅಭಿವೃದ್ಧಿಪಡಿಸಬಹುದಾದ ಉದ್ದವನ್ನು ಮಾತ್ರ ನಿರ್ವಹಿಸಿ, ಈ ಕಾಮಗಾರಿಗಳನ್ನು ಮೊಟಕುಗೊಳಿಸಲಾಗಿದೆ.

ಆ) ಈ ಎರಡೂ ರಸ್ತೆಗಳ ಪ್ರಸ್ತುತ ಪರಿಸ್ಥಿತಿ ಅನ್ವಯ ಉಳಿಕೆ ಕಾಮಗಾರಿಗೆ ಅಂದಾಜುಗಳನ್ನು ತಯಾರಿಸಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಅನುಮೋದನೆಗೆ ಕಳುಹಿಸಲಾಗಿದೆ.

ಇ) ಎಂ.ಎ.ಡಿ.ಬಿ. ಇಂದ ಅನುಮೋದನೆ ದೊರೆತ ನಂತರ ಕೈಗೊಳ್ಳಲಾಗುವುದು.

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಬೈಪಾಸ್ ರಸ್ತೆ ನಿರ್ಮಾಣ

2419 (2808) : ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೆ.ಆರ್. ನಗರ ತಾಲ್ಲೂಕು ಚುಂಚನಕಟ್ಟೆ ಹೋಬಳಿಗೆ ಸೇರಿದ ಹನಸೋಗೆ ಗ್ರಾಮದಲ್ಲಿ ಬೈ-ಪಾಸ್ ರಸ್ತೆ ಮಾಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಆ) ಈ ಯೋಜನೆಯನ್ನು ಪ್ರಾರಂಭ ಮಾಡುವುದು ಯಾವಾಗ;

ಇ) ಎಷ್ಟು ಅಂದಾಜಿನಲ್ಲಿ ಈ ಕಾಮಗಾರಿಯನ್ನು ಪ್ರಾರಂಭ ಮಾಡಲಾಗುವುದು;

ಈ) ಪೂರ್ಣಗೊಳಿಸುವುದಕ್ಕೆ ನಿಗದಿಪಡಿಸಿರುವ ಅವಧಿ ಎಷ್ಟು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಸದ್ಯಕ್ಕೆ ಪ್ರಸ್ತಾವನೆ ಇರುವುದಿಲ್ಲ.

ಆ) ಮತ್ತು ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಸರ್ಕಾರದ ಯೋಜನೆಗಳಲ್ಲಿ ಬೈಪಾಸ್ ನಿರ್ಮಾಣ ಆದ್ಯತೆಯಲ್ಲಿ ಇರುವುದಿಲ್ಲ. ಅನೇಕ ತಾಲ್ಲೂಕು ಕೇಂದ್ರಗಳಿಗೆ ಹೊರವಲಯ ರಸ್ತೆ ಇನ್ನೂ ನಿರ್ಮಿಸದೆ ಇರುವುದರಿಂದ ದೊಡ್ಡ ಹನಸೋಗೆ ಗ್ರಾಮಕ್ಕೆ ಬೈಪಾಸ್ ರಸ್ತೆ ನಿರ್ಮಾಣವನ್ನು ಸರ್ಕಾರ ಸಧ್ಯ ಯೋಜಿಸಿರುವುದಿಲ್ಲ.

ಪಿರಿಯಾಪಟ್ಟಣ ವಿಧಾನ ಸಭಾ ಕ್ಷೇತ್ರದಲ್ಲಿನ ಕಾವೇರಿ ನದಿಗೆ ಅಡ್ಡ ಸೇತುವೆ ನಿರ್ಮಾಣ

2420 (2809) : ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಿರಿಯಾಪಟ್ಟಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೆ.ಆರ್. ನಗರದ ಚುಂಚನಕಟ್ಟೆ ಹೋಬಳಿಗೆ ಸೇರಿದ ಹನಸೋಗೆ ಗ್ರಾಮದ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣದ ಪ್ರಸ್ತಾವನೆ ಈಗ ಯಾವ ಹಂತದಲ್ಲಿದೆ;

ಆ) ಹಾಗಿದ್ದಲ್ಲಿ, ಎಷ್ಟು ಅಂದಾಜು ನಿಗದಿಪಡಿಸಲಾಗಿದೆ;

ಇ) ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು;

ಈ) ಪೂರ್ಣಗೊಳಿಸಲು ನಿಗದಿಪಡಿಸಿರುವ ಅವಧಿ ಎಷ್ಟು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ರಾಮನಾಥ್‌ಪುರ ಹನಸೋಗೆ ರಸ್ತೆ ಗ್ರಾಮಾಂತರ ರಸ್ತೆಯಾಗಿರುತ್ತದೆ. ಆದರೂ ಈ ರಸ್ತೆಯಲ್ಲಿ ಬರುವ ಕಾವೇರಿ ನದಿಗೆ ನಿರ್ಮಿಸ ಬೇಕಾಗಿರುವ ಬೃಹತ್ ಸೇತುವೆ ಪ್ರಸ್ತಾವನೆ ಲೋಕೋಪಯೋಗಿ ಇಲಾಖೆಯಲ್ಲಿ ಸಧ್ಯಕ್ಕೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದ ಎಲ್ಲಾ ತಾಲ್ಲೂಕು ಕಛೇರಿಗಳಲ್ಲಿ ಕಂಪ್ಯೂಟರ್ ಅಳವಡಿಕೆ

2421 (3119) : ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ತಾಲ್ಲೂಕು ಕಛೇರಿಗಳಲ್ಲಿ ಕಂಪ್ಯೂಟರೀಕರಣ ಮಾಡಲಾಗಿದೆಯೆ; ಇದರಿಂದ ರೈತರಿಗೆ ಆಗುವ ಅನುಕೂಲಗಳೇನು;

ಆ) ಸದರಿ ಕಂಪ್ಯೂಟರೀಕರಣದಿಂದ ಆಗುವ ಲಾಭದ ಮಾಹಿತಿ ಅಥವಾ ತೊಂದರೆಯಾಗುತ್ತಿರುವ ಜನರ ಅಹವಾಲು ಪಡೆಯಲು ಯಾವ ರೀತಿಯ ಮೌಲ್ಯಮಾಪನದ ವ್ಯವಸ್ಥೆ ಮಾಡಲಾಗಿದೆ?